RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ–IVA | ಬೆಂಗಳೂರು, ಮಂಗಳವಾರ, ಜುಲೈ ೧೨, ೨೦೧೬ (ಆಷಾಢ ೨೧, ಶಕ ವರ್ಷ ೧೯೩೮) | ನಂ. ೯೦೯ |
|---|---|---|
| **Part–IVA** | **Bengaluru, Tuesday, July 12, 2016 (Ashada 21 Shaka Varsha 1938)** | **No. 909** |


## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಗ್ರಾಅಪ/250/ಗ್ರಾಪಂಅ/2016, ಬೆಂಗಳೂರು, ದಿನಾಂಕ:12–07–2016**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣ 311 ರಲ್ಲಿ ಅಗತ್ಯಪಡಿಸಲಾದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರ ಆಸ್ತಿ ಘೋಷಣೆ) ನಿಯಮಗಳು, 2016ರ ಕರಡನ್ನು ದಿನಾಂಕ: 25–05–2016 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ–IV-A ರಲ್ಲಿ ಪ್ರಕಟಿಸಿ ಅದರಿಂದ ಭಾದಿತರಾಗುವ ವ್ಯಕ್ತಿಗಳಿಂದ ಸದರಿ ಕರಡಿಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಲ್ಲಿಸಬೇಕೆಂದು ಕೋರಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ: 25–05–2016 ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಬಾರದಿರುವುದರಿಂದ;

ಈಗ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 311ನೇ ಪ್ರಕರಣದೊಂದಿಗೆ ಓದಲಾದಂತೆ ಸದರಿ ಅಧಿನಿಯಮದ ಪ್ರಕರಣ 43ಬಿ, 136ಎ ಮತ್ತು 175ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ನಿಯಮಗಳನ್ನು ರಚಿಸುತ್ತದೆ, ಎಂದರೆ:–

## ನಿಯಮಗಳು

**1.ಹೆಸರು ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರ ಆಸ್ತಿ ಘೋಷಣೆ) ನಿಯಮಗಳು, 2016 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿತವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:–**ಈ ನಿಯಮಗಳಲ್ಲಿ ವಿಷಯಕ್ಕೆ ಅಥವಾ ಸಂಧರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ:–

(a)**"ಅಧಿನಿಯಮ"** ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14);

(b)**"ಪ್ರಕರಣ"** ಎಂದರೆ ಅಧಿನಿಯಮದ ಪ್ರಕರಣ;

(c) **"ನಮೂನೆ"** ಎಂದರೆ ಈ ನಿಯಮಕ್ಕೆ ಲಗತ್ತಿಸಲಾದ ನಮೂನೆ.

**3. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರ ಆಸ್ತಿ ಘೋಷಣೆಯ ರೀತಿ ಹಾಗೂ ನಮೂನೆ:–** (1) ಗ್ರಾಮ ಪಂಚಾಯತಿಯ ಸದಸ್ಯನು ತಾನು ಮತ್ತು ತನ್ನ ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರು ಎರಡು ಲಕ್ಷಕ್ಕಿಂತ ಹೆಚ್ಚಿನ ಚರ ಮತ್ತು ಸ್ಥಿರ ಆಸ್ತಿಯನ್ನು ಮತ್ತು ಹೊಣೆಗಾರಿಕೆಗಳನ್ನು ಹೊಂದಿರುವುದರ ಬಗ್ಗೆ ರಾಜ್ಯ ಚುನಾವಣಾ ಆಯೋಗದ ಮುಂದೆ ಘೋಷಣೆಯನ್ನು ನಮೂನೆ–1 ರಲ್ಲಿ ತನ್ನ ಪದಾವಧಿಯು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳೊಳಗೆ ಮತ್ತು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಅವನ ಅಧಿಕಾರಾವಧಿ ಮುಗಿಯುವ ತನಕ ಮತ್ತು ಪ್ರತಿ ಆರ್ಥಿಕ ವರ್ಷ ಮುಕ್ತಾಯವಾದ ಒಂದು ತಿಂಗಳೊಳಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಮೂಲಕ ದಾಖಲು ಮಾಡತಕ್ಕದ್ದು;

(2) ಪ್ರತಿಯೊಬ್ಬ ತಾಲ್ಲೂಕು ಪಂಚಾಯತಿಯ ಸದಸ್ಯನು ಸಂಬಂಧಪಟ್ಟ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯ ಮೂಲಕ ರಾಜ್ಯ ಚುನಾವಣಾ ಮುಂದೆ ನಮೂನೆ–1 ರಲ್ಲಿ ತಾನು ಹೊಂದಿರುವ ಮತ್ತು ತನ್ನ ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರು ಹೊಂದಿರುವ ಎರಡು ಲಕ್ಷಕ್ಕಿಂತ ಹೆಚ್ಚಿನ ಚರ ಮತ್ತು ಸ್ಥಿರ ಆಸ್ತಿಯ ಮತ್ತು ಹೊಣೆಗಾರಿಕೆಯ ಘೋಷಣೆ ಮಾಡತಕ್ಕದ್ದು;

(3) ಜಿಲ್ಲಾ ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮೂಲಕ ರಾಜ್ಯ ಚುನಾವಣಾ ಆಯೋಗದ ಮುಂದೆ ನಮೂನೆ–1 ರಲ್ಲಿ ತಾನು ಹೊಂದಿರುವ ಮತ್ತು ತನ್ನ ಕುಟುಂಬದ ಎಲ್ಲಾ ಸದಸ್ಯರು ಹೊಂದಿರುವ ಎರಡು ಲಕ್ಷಕ್ಕಿಂತ ಹೆಚ್ಚಿನ ಚರ ಮತ್ತು ಸ್ಥಿರ ಆಸ್ತಿಯ ಮತ್ತು ಹೊಣೆಗಾರಿಕೆಯ ಘೋಷಣೆ ಮಾಡತಕ್ಕದ್ದು;

4. **ನಿರಸನ:–** ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರ ಆಸ್ತಿ ಘೋಷಣೆ) ನಿಯಮಗಳು, 2010 ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಸದರಿ ನಿರಸನವು ಸದರಿ ನಿಯಮಗಳನ್ನು ಈ ಹಿಂದೆ ಜಾರಿಗೊಳಿಸುವುದನ್ನು ಅಥವಾ ಅವುಗಳಡಿಯಲ್ಲಿ ಯಥೋಚಿತವಾಗಿ ಮಾಡಿದ ಅಥವಾ ಅದರಿಂದ ಅನುಭವಿಸಿದ ಯಾವುದೇ ವಿಷಯಕ್ಕೆ ಭಾದೆ ಉಂಟುಮಾಡತಕ್ಕದ್ದಲ್ಲ ಅಥವಾ ಸದರಿ ನಿಯಮಗಳಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ಹೊಣೆಗಾರಿಕೆ ಅಥವಾ ಬಾಧ್ಯತೆಗೆ ಭಾದೆಯನ್ನುಂಟುಮಾಡತಕ್ಕದ್ದಲ್ಲ.

## ನಮೂನೆ–1

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರು ಮತ್ತು ಅವರ ಅವಿಭಕ್ತ ಕುಟುಂಬದ ಸದಸ್ಯರು ಹೊಂದಿರುವ ಆಸ್ತಿ ಮತ್ತು ಹೊಣೆಗಾರಿಕೆ ಘೋಷಣೆ) ನಿಯಮಗಳು 2016 ರನ್ವಯ.

----------------------------ನೇ ವರ್ಷಕ್ಕಾಗಿ **ಶ್ರೀ/ಶ್ರೀಮತಿ**------------------------ ಗ್ರಾಮ ಪಂಚಾಯತಿ/ತಾಲ್ಲೂಕು ಪಂಚಾಯತಿ/ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರಾದ ಇವರು ಭರ್ತಿ ಮಾಡಿರುವ ಒಟ್ಟಾರೆಯಾಗಿ ರೂ. 2 ಲಕ್ಷ ಮೀರಿದ ಆಸ್ತಿ ಮತ್ತು ಹೊಣೆಗಾರಿಕೆಯ ವಿವರಣೆ.

| | | |
|---|---|---|
| 1 | ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಸದಸ್ಯರ ಹೆಸರು, ಖಾಯಂ ವಿಳಾಸ, ದೂರವಾಣಿ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆ | |
| 2 | ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಸದಸ್ಯರ ಕುಟುಂಬದ ಸದಸ್ಯರಿಂದ ತಂದೆ/ತಾಯಿಯ ಮತ್ತು ಅವಿಭಕ್ತ ಕುಟುಂಬದ ಸದಸ್ಯರುಗಳ ಹೆಸರುಗಳು ಮತ್ತು ಪ್ರತಿಯೊಬ್ಬರಿಗಿರುವ ಸಂಬಂಧ | |

| | | |
|---|---|---|
| 3 | ಪ್ರಸ್ತುತ ವಾರ್ಷಿಕ ವರಮಾನ | |
| 4 | **ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಸದಸ್ಯರ ಆಸ್ತಿ ಮತ್ತು ಹೊಣೆಗಾರಿಕೆ ವಿವರಣೆ.** | |
| | ಅ) ನಿಗಮ ಅಥವಾ ಮಂಡಳಿಗಳಲ್ಲಿ ತೊಡಗಿಸಿರುವ ಹಣದ ವಿವರಗಳು | |
| | ಆ) ಬ್ಯಾಂಕ್ ಖಾತೆಗಳು | |
| | ಇ) ಬ್ಯಾಂಕ್ ಠೇವಣಿಗಳು | |
| | ಈ) ಅಂಚೆ ಕಚೇರಿ ಖಾತೆಗಳು | |
| | ಉ) ಅಂಚೆ ಕಚೇರಿ ಮೂಲಕ ಪಡೆದ ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರಗಳು ಹಾಗೂ ಇತರೆ ಪ್ರಮಾಣ ಪತ್ರಗಳು | |
| | ಊ) ಯುನಿಟ್ ಟ್ರಸ್ಟ್ ಆಫ್ ಇಂಡಿಯಾದ ಯುನಿಟ್‌ಗಳು | |
| | ಋ) ಸರ್ಕಾರಿ ಹಾಗೂ ಇತರೆ ಭದ್ರತೆಗಳು | |
| | ೠ) ಕಂಪನಿಗಳಲ್ಲಿ ತೊಡಗಿಸಿರುವ ಷೇರುಗಳು, ಡಿಬೆಂಚರುಗಳು ಅಥವಾ ಠೇವಣೆಗಳು | |
| | ಎ) ಸಾಲವಾಗಿ ಅಥವಾ ಅನ್ಯಥಾ ಇತರೆ ರೀತಿಯಲ್ಲಿ ಬೇರೆಯವರಿಗೆ ನೀಡಿದ ಮುಂಗಡ ಹಣ | |
| | ಏ) ಜೀವವಿಮಾ ಪಾಲಿಸಿಗಳು ಮತ್ತು ಭವಿಷ್ಯನಿಧಿ | |
| | ಐ) ಸ್ಥಿರಾಸ್ತಿಗಳು ಮೇಲಲ್ಲದೆ ಇತರೆಯವುಗಳ ಮೇಲೆ ಹೂಡಿದ ಬಂಡವಾಳಗಳು | |
| | **ಟಿಪ್ಪಣಿ:** ಮೇಲಿನ ವಿವರಗಳು ಕೋಷ್ಟಕದ ರೂಪದಲ್ಲಿದ್ದು ಅದರಲ್ಲಿ ಆಸ್ತಿಗಳನ್ನು ಅರ್ಜಿಸಿದ ದಿನಾಂಕ, ಬೆಲೆ ಮತ್ತು ಮೂಲವನ್ನೂ ಮತ್ತು ಅವುಗಳನ್ನು ಗುರುತಿಸಲು ಸಾಕಾಗುವಷ್ಟು ವಿವರಗಳನ್ನು ಯಾವ ವ್ಯಕ್ತಿಯ ಹೆಸರಿನಲ್ಲಿ ಮತ್ತು ಯಾವ ಸ್ಥಳದಲ್ಲಿ ಇವೆ ಎಂಬ ವಿವರಗಳು ಇರಬೇಕು. | |
| 5 | **4ನೇ ಬಾಬ್ತಿನಲ್ಲಿ ಒಳಗೊಂಡಿರುವ ಇತರೆ ಚರಾಸ್ಥಿಗಳು:** | |
| | ಅ) ಆಭರಣಗಳು ಮತ್ತು ಚಿನ್ನ ಅಥವಾ ಬೆಳ್ಳಿಗಟ್ಟಿ | |
| | ಆ) ವಾಹನಗಳು | |
| | ಇ) ರೆಫ್ರಿಜರೇಟರು | |
| | ಈ) ವಿಡಿಯೋ ಕ್ಯಾಸೆಟ್ ಪ್ಲೇಯರ್‌ಗಳು | |
| | ಉ) ಹವಾ ನಿಯಂತ್ರಕಗಳು | |
| | ಊ) ಟೆಲಿವಿಷನ್ ಸೆಟ್ಟುಗಳು | |
| | ಋ) ವಿಡಿಯೋ ಕ್ಯಾಸೆಟ್ ರೆಕಾರ್ಡರ್ | |
| | ಎ) ಪ್ರಾಚೀನ ವಸ್ತುಗಳು | |
| | ಏ) ಬೆಳ್ಳಿ ಸಾಮಾಗ್ರಿಗಳು | |
| | ಐ) ವ್ಯಾಪಾರ ಸಂಬಂಧಗಳು | |
| | ಒ) ಜಾನುವಾರು | |
| | ಓ) ರೂ. 5,000/– ಮೀರಿದ ಬೆಲೆಯ ಪೀಠೋಪಕರಣಗಳು | |

| | | |
|---|---|---|
| | ಸೇರಿದಂತೆ ಇತರೆ ಚರಾಸ್ತಿಗಳು. | |
| 6 | **ಸ್ಥಿರಾಸ್ತಿಗಳು** | |
| | ಅ) ಕೃಷಿ ಜಮೀನುಗಳು | |
| | ಆ) ಕಟ್ಟಡ ನಿರ್ಮಿಸಿರದ ಕೃಷಿಯೇತರ ಜಮೀನುಗಳು | |
| | ಇ) ಕಟ್ಟಡಗಳು | |
| | ಈ) ಇತರೆ ಸ್ಥಿರಾಸ್ತಿಗಳು | |
| | **ಟಿಪ್ಪಣಿ:** ನೀಡಬೇಕಾದ ಮಾಹಿತಿಯು ಕೋಷ್ಠಕದ ರೂಪದಲ್ಲಿದ್ದು ಅದರಲ್ಲಿ ಆಸ್ತಿಯ ಪಟ್ಟಿ ನಿರ್ವಹಿಸಿದ ದಿನಾಂಕ ಮತ್ತು ಮೂಲ ಹಾಗೂ ಅದರಲ್ಲಿ ಸದಸ್ಯರಿಗೆ ಇರುವ ಹಿತಾಸಕ್ತಿ ಅದರ ಸ್ಥಳ ಹಾಗೂ ಅದನ್ನು ಗುರುತಿಸಲು ಸಾಕಾಗುವಷ್ಟು ವಿವರಗಳು ಇರಬೇಕು. | |
| | **ಹೊಣೆಗಾರಿಕೆ:–** | |
| | ಅ) ಹೊಣೆಗಾರಿಕೆ ಸ್ವರೂಪ: ವ್ಯಾಪ್ತಿ ಹಾಗೂ ಇತರೆ ವಿವರಗಳು ಮತ್ತು ಅದನ್ನು ವಹಿಸಿಕೊಂಡ ದಿನಾಂಕ | |
| | ಆ) ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಸದಸ್ಯರು ಯಾರಿಗೆ ಹೊಣೆಗಾರರಾಗಿರುವರೋ, ಆ ವ್ಯಕ್ತಿಯ ಹೆಸರು ಮತ್ತು ವಿಳಾಸ | |
| | ಇ) ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಸದಸ್ಯರ ಕುಟುಂಬದ ಸದಸ್ಯರ ಆಸ್ತಿಗಳು ಮತ್ತು ಹೊಣೆಗಾರಿಕೆ ವಿವರಣೆ | |

––––––––––––––––––––ಆದ ನಾನು ಮೇಲೆ ನೀಡಿರುವ ಮಾಹಿತಿ ಸತ್ಯವಾದುದೆಂದು ಹಾಗೂ ಯಾವುದೇ ರೀತಿಯ ವಾಸ್ತವಾಂಶವನ್ನು ಬಿಟ್ಟಿಲ್ಲವೆಂದು ಪ್ರಮಾಣ ಮಾಡುತ್ತೇನೆ.

**ಸ್ಥಳ:** **ಸದಸ್ಯರ ಸಹಿ––––––––––––––––––**
**ದಿನಾಂಕ:** **ಪದನಾಮ––––––––––––––––––––**
**ಕ್ಷೇತ್ರ––––––––––––––––––––––––"**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಟಿ.ವಿ. ಅರುಣ್‌ಕುಮಾರ್**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.